ಮಾಡಿದ್ದೆವು ಎನ್ನುವ ಅಂಕಿ ಸಂಖ್ಯೆಗಳನ್ನು ನಿಮಗೆ ಕೊಟ್ಟಿದ್ದೇವೆ, ವರ್ಷ ವರ್ಷ ಯಾವರೀತಿ ಬ್ಯಾಕ್‌ಲಾಗ್ ಆಗುತ್ತಿದೆ ಎನ್ನುವ ಉತ್ತರವನ್ನು ನಿಮಗೆ ಕೊಟ್ಟಿದ್ದೇವೆ, ಮುಂದಿನ ವರ್ಷದ್ದು ಕೂಡ ನಿಮಗೆ ಹೇಳಿದ್ದೇವೆ. ಈಗ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಡಿ ಎಂದು ಎಲ್ಲಾ ಸದನದ ಸದಸ್ಯರಲ್ಲಿ ಮನವಿ ಮಾಡಿಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ತಾವು (ರಮಾನಾಥ್ ರೈ) ಹಿರಿಯ ಸದಸ್ಯರು, ಪದೇ ಪದೇ ಎದ್ದು ನಿಂತುಕೊಂಡರೆ ಹೇಳಿದರೆ ಯಾವುದೂ ದಾಖಲೆಗೆ ಹೋಗುವುದಿಲ್ಲ. ತಾವು ಒಬ್ಬ ಹಿರಿಯ ಸದಸ್ಯರಾಗಿ, ಅವರು ಉತ್ತರ ಹೇಳುತ್ತಿದ್ದಾರೆ, ಮಧ್ಯದಲ್ಲಿ ಪದೇ ಪದೇ ಏಳುತ್ತೀರಿ, ಅದು ಸೌಜನ್ಯವೆ? ಹಾಗೆ ಮಧ್ಯದಲ್ಲಿ ಎದ್ದರೆ ಅವರೇನು ಉತ್ತರವನ್ನು ಕೊಡಬೇಕು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಲ್ಲಾ ಯೋಜನೆಗಳಿಗೆ, ಈಗಾಗಲೇ ಎಲ್ಲರಿಗೂ ಸರ್ಕಾರಿ ಆದೇಶವನ್ನು ಹೊರಡಿಸಿ ಎಲ್ಲರಲ್ಲೂ ರಿಕ್ವೆಸ್ಟ್ ಮಾಡಿಕೊಂಡಿದ್ದೆವು, ಫಲಾನುಭವಿಗಳ ಪಟ್ಟಿಯನ್ನು ಕೊಡಿ, ಈ ವರ್ಷ ಬ್ಯಾಕ್‌ಲಾಗ್‌ಆಗದೇ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಎಲ್ಲಾ ಸದಸ್ಯರಿಗೂ ಕೂಡ ಪತ್ರವನ್ನು ಬರೆದಿದ್ದೇವೆ, ಅವರು ಫಲಾನುಭವಿಗಳ ಪಟ್ಟಿಯನ್ನು ಕೊಡಲಿ, ಕೂಡಲೆ ಮನೆಗಳನ್ನು ಪ್ರಾರಂಭ ಮಾಡುತ್ತೇವೆ. ಈಗೇನಾಗಿದೆ ಎನ್ನುವ ಇಲ್ಲಿಯತನಕದ ವಿವರಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ. ರಮಾನಾಥ್ ರೈ : ಈ ವರ್ಷದಲ್ಲಿ ಇಷ್ಟು ಮನೆಗಳನ್ನು ಕಟ್ಟದಿದ್ದರೆ, ಅದು ಲ್ಯಾಪ್ಸ್ ಆಗುತ್ತದೆ, ಮತ್ತೆ ಶಾಸಕರು ಪಟ್ಟಿ ಕೊಡಬೇಕೆಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ಈ ವಿಚಾರವನ್ನು ಡಿಮ್ಯಾಂಡ್ ಮೇಲಿನ ಚರ್ಚೆಯಲ್ಲಿ ಮಾತನಾಡಿ, ಮುಂದಿನ ಪ್ರಶ್ನೆ ಬಚ್ಚೇಗೌಡ ಕೆ.ಪಿ ಅವರು ಕೇಳುವುದು.

ಚಿಕ್ಕಬಳ್ಳಾಪುರ ನಗರಸಭೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ.

27 (62) ಶ್ರೀ ಬಚ್ಚೇಗೌಡ ಕೆ ಪಿ:(ಚಿಕ್ಕಬಳ್ಳಾಪುರ) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರ ಸಭೆಯಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಅಕ್ರಮಗಳ ಬಗ್ಗೆ ಸರ್ಕಾರ ತನಿಖೆ ನಡೆಸಿದೆಯೇ; ತನಿಖಾ ವರದಿಯಲ್ಲಿರುವ ತಪ್ಪಿತಸ್ತ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ತನಿಖಾ ವರದಿಯ ಮೇಲೆ ಆರೋಪಿತರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಾಮಾವಳಿಗಳು 1957ರ ನಿಯಮ 11 ರನ್ವಯ ಜಂಟಿ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದ್ದು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿದೆ.

ಈ) ಚಿಕ್ಕಬಳ್ಳಾಪುರ ನಗರ ಸಭೆಯನ್ನು ಸೂಪರ್ ಸೀಡ್ ಮಾಡುವಂತೆ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಈ ಅರ್ಜಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಜಾರಕಿಹೋಳಿ(ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):

ಅ) ಹೌದು

ಆ) ಹೌದು

ಇ) ಹಾಗಿದ್ದಲ್ಲಿ, ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು); ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 11ರನ್ವಯ ಜಂಟಿ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ.

ಈ) ಚಿಕ್ಕಬಳ್ಳಾಪುರ ನಗರ ಸಭೆಯಲ್ಲಿ ಅವ್ಯವಹಾರಗಳು ನಡೆದಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ ತನಿಖಾ ತಂಡವನ್ನು

ನಿಯೋಜಿಸಲಾಗಿದ್ದು, ತಂಡದ ಮಧ್ಯಂತರ ತನಿಖಾ ತಂಡವನ್ನು ನಿಯೋಜಿಸಲಾಗಿದ್ದು, ತಂಡದ ಮಧ್ಯಂತರ ತನಿಖಾ ವರದಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಈ ವರದಿಯನ್ನು ಪರಶೀಲಿಸಿದೆ ನಂತರ ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 1964 ರನ್ವಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಪಿ. ಬಚ್ಚೇಗೌಡ : ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ ಇದರಲ್ಲಿ ಸ್ಪಷ್ಟವಾದ ಉತ್ತರವಿಲ್ಲ, ಅನೇಕ ಅಕ್ರಮಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಸರಿಯಾದ ಉತ್ತರ ಬಂದಿಲ್ಲ. ನಮ್ಮ ಉಸ್ತುವಾರಿ ಸಚಿವರು 4.6.2010ರಂದು ಮುಖ್ಯಮಂತ್ರಿಗಳಿಗೆ ಸುದೀರ್ಘವಾದ ಉತ್ತರವನ್ನು ಬರೆದು, ಚಿಕ್ಕಬಳ್ಳಾಪುರ ನಗರ ಸಭೆಯನ್ನು ಸೂಪರ್‌ಸೀಡ್ ಮಾಡುವುದು ಅನಿವಾರ್ಯವಾಗಿದೆ, ಅಂತೆಯೇ ಪರ್ಯಾಯವಾಗಿ ಒಬ್ಬ ದಕ್ಷ ಅಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗಿ ತಮ್ಮ ನಗರಾಭಿವೃದ್ಧಿಯ ಕನಸು ನನಸಾಗಿಸಲು ಪೂರಕವಾಗಿರುತ್ತದೆ, ಆದುದರಿಂದ ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಿರೆಂದು ಅವರು ಹೇಳುತ್ತಾರೆ, ಜಿಲ್ಲಾಧಿಕಾರಿಗಳು ಕೂಡ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತಾರೆ. ಇವರು ಈ ರೀತಿ ಹೇಳುತ್ತಾ ಹೋದರೆ, ಊರೆಲ್ಲಾ ಕೊಳ್ಳೆ ಹೊಡೆದ ನಂತರ ಊರು ಬಾಗಿಲು ಹಾಕಿಕೊಂಡರು ಎನ್ನುವ ಪದ್ದತಿಯಾಗುತ್ತದೆ. ನಗರ ಸಭೆಗಳ ಸಭೆಗಳು ನಿರ್ದಿಷ್ಟ ಸಮಯಕ್ಕೆ ನಡೆಯುತ್ತಿಲ್ಲ. ಇದಕ್ಕೆ ಸರಿಯಾದ ಉತ್ತರ ಬಂದಿಲ್ಲ.

ಶ್ರೀ ಬಾಲಚಂದ್ರ ಜಾರಕಿಹೋಳಿ: ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಎರಡು ಆರೋಪಗಳು ಬಂದಿವೆ, ಅಮೀರ್ ಅಹ್ಮದ್ ಸಾದಿಕ್ ಎನ್ನುವ ಮಾಜಿ ನಗರಸಭೆ ಸದಸ್ಯರೊಬ್ಬರು ಅಧಿಕಾರಿಗಳಿಂದ ಈ ಒಂದು ನಗರಸಭೆಯಲ್ಲಿ ಅವ್ಯವಹಾರವಾಗಿದೆ ಎಂದು ಒಂದು ಆರೋಪ ಮಾಡುತ್ತಾರೆ. ಆ ಅಧಿಕಾರಿಗಳ ಬಗ್ಗೆ ನಾವು ಈಗಾಗಲೇ ಒಂದು ಟೀಂ ಅನ್ನು ಕಳುಹಿಸಿ ಎನ್‌ಕ್ವೈರಿ ಮಾಡಿ, ಚಾರ್ಜ್‌ಶೀಟ್‌ನ್ನು ಅವರಿಗೆ ಇಷ್ಯು ಮಾಡಿ ಒಂದು ಎನ್‌ಕ್ವೈರಿ ಹಂತದಲ್ಲಿದೆ, ಇದು ಒಂದನೇ ಆರೋಪ. ಎರಡನೇ ಆರೋಪ, ಪಿ.ಶ್ರೀನಿವಾಸ ಹಾಗೂ ಇತರೆ ಸದಸ್ಯರು, ಈ ನಗರಸಭೆಯಲ್ಲಿ ಅವ್ಯವಹಾರವಾಗಿದೆ, ಇದನ್ನು ಸೂಪರ್‌ಸೀಡ್

ಮಾಡಬೇಕೆಂದು ಒಂದು ಅರ್ಜಿಯನ್ನು ಕೊಟ್ಟರು. ಕೊಟ್ಟ ನಂತರ ತಮ್ಮ ಇಲಾಖೆಯ 3 ಜನ ಹಿರಿಯ ಅಧಿಕಾರಿಗಳ ತಂಡವನ್ನು ಅಲ್ಲಿಗೆ ಕಳುಹಿಸಿದ್ದೇವು. 5ನೇ ತಿಂಗಳಲ್ಲಿ ಅಲಿಗೇಷನ್ ಆದ ನಂತರ, ಜೂನ್ ತಿಂಗಳಲ್ಲಿ 3 ದಿವಸ ಅಲ್ಲಿಗೆ ಹೋಗಿ, ಈಗಾಗಲೇ ಒಂದು ಕಮಿಟಿ ಹೋಗಿ ಮಧ್ಯಂತರ ವರದಿಯನ್ನು ಕೊಟ್ಟಿದೆ. ಇನ್ನೂ ಕಾಲಾವಕಾಶ ಬೇಕೆಂದು ಕೇಳಿದ್ದರಿಂದ ಮತ್ತೆ ಅವರನ್ನು ಎನ್‌ಕ್ವೈರಿಗೆ ಕಳುಹಿಸುತ್ತಿದ್ದೇವೆ, ಸಂಪೂರ್ಣವಾದ ವರದಿ ಬಂದ ನಂತರ ಅದರ ಬಗ್ಗೆ ಸೂಕ್ತವಾದ ವಿಚಾರಣೆ ಮಾಡಿ ಖಂಡಿತವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಪಿ. ಬಚ್ಚೇಗೌಡ : ಪೌರಾಡಳಿತ ಸಚಿವರು ಹೇಳಿದ್ದಾರೆ, ಅದೇರೀತಿ ಜಿಲ್ಲಾಧಿಕಾರಿಗಳ ವರದಿ ಕೂಡ ಇದೆ, ಇದು ಬರೀ ಅಧಿಕಾರಿಗಳ ತಪ್ಪಲ್ಲ, ಚುನಾಯಿತ ಪ್ರತಿನಿಧಿಗಳು ಸರಿಯಾದ ಸಮಯಕ್ಕೆ ಸಭೆ ಸೇರದೆ, ಕೆಲವು ಕಾಮಗಾರಿಗಳಾಗದೆ ಬಿಲ್ಲನ್ನು ಪಾವತಿ ಮಾಡಿರುವುದು, ಕಚೇರಿ ಕಡತಗಳನ್ನು ಮನೆಗೆ ತೆಗೆದುಕೊಂಡು ಹೋಗಿರುವುದು, ಕೋರ್ಟ್ ಆದೇಶವಾಗಿದ್ದರೂ ಕೂಡ ನಗರಸಭೆಯ ಆಸ್ತಿಯನ್ನು ಖಾಸಗಿಯವರಿಂದ ವಶಪಡಿಸಿಕೊಳ್ಳದೆ ಅವರೊಡನೆ ಶಾಮೀಲಾಗಿರುವುದು, ಇದೆಲ್ಲಾ ಇರುವುದರಿಂದ ಈ ಬಗ್ಗೆ ಸಿಒಡಿ ಅಥವಾ ಲೋಕಾಯುಕ್ತ ತನಿಖೆಯಾಗಬೇಕೆ ಹೊರತು ಇಲಾಖೆ ತನಿಖೆಯಿಂದಾಗುವುದಿಲ್ಲ. ಜೊತೆಗೆ ಈ ಇಲಾಖೆ ತನಿಖೆಯಾಗುವ ಸಂದರ್ಭದಲ್ಲಿ, ಅಲ್ಲಿ ಆಡಳಿತ ಮಂಡಳಿಯ ನಗರಸಭೆ ಇದ್ದರೆ, ಇದು ಕೂಡ ದಿಕ್ಕು ತಪ್ಪುತ್ತದೆ, ತನಿಖೆ ಸಮರ್ಪಕವಾಗಿ ಆಗುವುದಿಲ್ಲ, ಕೂಡಲೆ ಸಚಿವರು ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ, ಆ ಬಗ್ಗೆ ಸಾಕಷ್ಟು ಕಡತಗಳು ನನ್ನಲ್ಲಿವೆ, ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಕಳುಹಿಸಿಕೊಡಿ.

ಶ್ರೀ ಬಾಲಚಂದ್ರ ಜಾರಕಿಹೋಳಿ: ಮಾನ್ಯ ಶಾಸಕರು ಹೇಳಿದಂತೆ ಉಸ್ತುವಾರಿ ಸಚಿವರು ಪತ್ರ ಬರೆದ ನಂತರ ಆ ಪತ್ರದ ಮೇಲೆ ಎನ್‌ಕ್ವೈರಿಗೆ ನಾವು ಒಂದು ಆದೇಶ ಮಾಡಿದ್ದೇವೆ. ಈ ಆಗಸ್ಟ್ ತಿಂಗಳಲ್ಲಿ ಇನ್ನೊಂದು ಕಮಿಟಿಯನ್ನು ಕಳುಹಿಸಿ, ವರದಿ ಬಂದ ನಂತರ ಸೂಕ್ತವಾದ ಕ್ರಮವನ್ನು

ಖಂಡಿತವಾಗಿ ಸರ್ಕಾರ ತೆಗೆದುಕೊಳ್ಳುತ್ತದೆ, ಅಲ್ಲಿ ಅವ್ಯವಹಾರವಾಗಿದ್ದರೆ ಅದಕ್ಕೆ ಅವಕಾಶ ಕೊಡುವುದಿಲ್ಲವೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು : ಶ್ರೀನಿವಾಸ ಎಂ. ಅವರು ಇಲ್ಲ. ಮಂಜುನಾಥ್ ಹೆಚ್.ಪಿ. ಅವರು ತಮ್ಮ ಪ್ರಶ್ನೆಯನ್ನು ಕೇಳುವುದು.

ಪ್ರಶ್ನೆ ಸಂಖ್ಯೆ 28 (94)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ರಾಜ್ಯದಲ್ಲಿ ನಡೆಯುವ ಅನಧಿಕೃತ ಗಣಿಗಾರಿಕೆಯ ಬಗ್ಗೆ

29 (101) ಶ್ರೀ ಹೆಚ್.ಪಿ. ಮಂಜುನಾಥ್: (ಹುಣಸೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವುದೇ ರೀತಿಯ ಗಣಿಗಾರಿಕೆ ನಡೆಸಲು ಗಣಿ ಮತ್ತು ಭೂವಿಜ್ಞಾನ, ಅರಣ್ಯ ಹಾಗೂ ಪರಿಸರ ಜೀವಿಶಾಸ್ತ್ರ ಇಲಾಖೆಯಿಂದ ಅನುಮತಿ ಅವಶ್ಯಕತೆ ಕಡ್ಡಾಯವೇ; (ಪೂರ್ಣ ವಿವರ ನೀಡುವುದು).

ಆ) ಅಧಿಕೃತ ಹಾಗೂ ಅನಧಿಕೃತ ಗಣಿಗಾರಿಕೆ ಇವೆರಡರ ಮಧ್ಯೆ ತಾಂತ್ರಿಕವಾಗಿ ಇರುವ ವ್ಯತ್ಯಾಸವೇನು; (ವಿವರಣೆ ನೀಡುವುದು).

ಇ) ಎಂ.ಎಂ. (ಡಿ & ಆರ್)ಕಾಯ್ದೆ, 1957 ಮತ್ತು ಖನಿಜ ರಿಯಾಯಿತಿ ನಿಯಮಾವಳಿ, 1960 ಮತ್ತು ಕರ್ನಾಟಕ ರಿಯಾಯಿತಿ ನಿಯಮಾವಳಿ, 1994ರ ಪ್ರಕಾರ, ಗಣಿಗುತ್ತಿಗೆಯನ್ನು ಪಡೆದು, ಗಣಿ ಗುತ್ತಿಗೆಗಾಗಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ವಯ ಗಣಿಗಾರಿಕೆಯನ್ನು ಮಾಡಿದ್ದಲ್ಲಿ, ಅದು ಅಧಿಕೃತ ಗಣಿಗಾರಿಕೆ ಹಾಗೂ ನಿಯಮಬಾಹಿರವಾಗಿ ಗಣಿಗಾರಿಕೆಯನ್ನು ಮಾಡಿದ್ದಲ್ಲಿ, ಅನಧಿಕೃತ ಗಣಿಗಾರಿಕೆಯಾಗುತ್ತದೆ.

ಈ) ಹುಣಸೂರು ತಾಲ್ಲೂಕಿನಲ್ಲಿ ಅಧಿಕೃತ ಗಣಿಗಾರಿಕೆ (ಮರಳು, ಜಲ್ಲಿಕಲ್ಲು, ಕ್ವಾರಿ, ಇತ್ಯಾದಿ) ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇದರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):